ಇಪ್ಪತ್ತೈದು ವರ್ಷದ ಹಿಂದೆ). ಅಲ್ಲದೇ ಅವನು ಸ್ಪಷ್ಟವಾಗಿ ಏನೂ ಹೇಳಿರಲಿಲ್ಲವಲ್ಲ? ನೀವು ತಪ್ಪು ಅರ್ಥ ಮಾಡಿಕೊಂಡಿದ್ದೀರಿ ಎಂದು ಸುಲಭವಾಗಿ ಅವನು ಹೇಳಬಹುದಿತ್ತು."

"ಕೆಲಸ ಬೇಡ ಎಂದು ಅವನಿಗೆ ಒದ್ದು ಬರಬೇಕಿತ್ತು, ನಿಮ್ಮ ಅಮ್ಮ ಹೇಳಿದ ಹಾಗೆ. ಅವರ ಗಂಡನಿಗೆ ಈ ವಿಷಯ ಹೇಳಿರಬೇಕು ನಿಮ್ಮ ಜಲಜಾ ಮೇಡಮ್. ಯಾವ ಗಂಡನಿಗಾದರೂ ಈ ರೀತಿ ಬೇರೆಯವರು ತನ್ನ ಹೆಂಡತಿಯ ಮೇಲೆ ಕಣ್ಣುಹಾಕಿದಾಗ ಅಸಾಧ್ಯ ಸಿಟ್ಟು ಬರುತ್ತದೆ. ಜಲಜಾ ಮೇಡಮ್‌ಗೆ ಬೇರೆ ಕೆಲಸ ಸಿಕ್ಕೇ ಸಿಗುತ್ತಿತ್ತು. ಅವರ ಗಂಡ ಖಂಡಿತಾ ಆ ಸೆಕ್ರೆಟರಿಗೆ ಎರಡು ಗೂಸ ಕೊಟ್ಟೇ ಕೊಟ್ಟಿರುತ್ತಾರೆ. ನಿಮ್ಮ ಹಸ್ಬೆಂಡೇ ಆಗಿದ್ದರೂ ಹಾಗೇ ಮಾಡುತ್ತಿದ್ದರು. ನಾನಾದರೂ ಹಾಗೇ ಮಾಡುತ್ತಿದ್ದೆ. ಇರಲಿ, ಈಗ ನೀವು ಹೇಳಿ ಮುಂದೇನಾಯಿತು ಅಂತ, ಜಲಜಾ ಮೇಡಮ್‌ನ ಗಂಡ ಏನು ಮಾಡಿದರು ಅಂತ."

"ನೀನು ಜಲಜಾ ಮೇಡಮ್ ಏನು ಮಾಡಿದರು ಅನ್ನುವ ಬದಲು ಅವರ ಗಂಡ ಏನು ಮಾಡಿದರು ಅಂತ ಕೇಳುತ್ತಿದ್ದೀಯ. ಇರಲಿ, ಅವರು ಇದನ್ನು ಹೇಗೆ ನಿಭಾಯಿಸಿದರು ಅಂತ ಹೇಳುತ್ತೀನಿ, ನೀನು ಆಮೇಲೆ ನಿನ್ನ ಉಪದೇಶ ನೀಡುವಂತೆ" ಎಂದ ಶರ್ಲಿ ತಮ್ಮ ಕತೆ ಮುಂದುವರೆಸಿದರು.

★★★

ಇದಾದ ಮೇಲೆ ಕೆಲವು ದಿನ ನಮ್ಮ ಅಮ್ಮನಿಗೆ ಜಲಜಾ ಮೇಡಮ್ ಸಿಗಲಿಲ್ಲ. ಸುಮಾರು ತಿಂಗಳಾದ ಮೇಲೆ ಸ್ವೀಟ್ ತೆಗೆದುಕೊಂಡು ನಮ್ಮ ಮನೆಗೆ ಬಂದರಂತೆ. "ಕೆಲಸ ಸಿಕ್ಕಿತು ಕಣೇ'' ಅಂದರಂತೆ. "ಏನು ಮಾಡಿದೆಯೇ ಜಲಜಾ, ಏನಾದರೂ ಆಗಲಿ, ಅಂದು ಅವನ ಜೊತೆ ಹೋಗಿ

